ಇರಬಹುದು. ಪ್ರಮುಖವಾಗಿ ಜೀವನಶೈಲಿಯ ಬದಲಾವಣೆ, ಜಂಕ್ ಆಹಾರ ಸೇವನೆ, ವಾತಾವರಣದಲ್ಲಿ ಹೊಗೆ, ದೂಳು, ವಿಷಯುಕ್ತ ಪದಾರ್ಥ ಸೇರಿದ್ದನ್ನು ಮಕ್ಕಳು ಉಸಿರಾಡುವುದೂ ಕಾರಣಗಳಾಗುತ್ತವೆ. ನಲವತ್ತು ವರ್ಷ ದಾಟಿದ ಮಹಿಳೆ ಗರ್ಭ ಧರಿಸಿ ಹೆರಿಗೆಯಾಗುವುದು ಕೂಡ ಈ ಸಮಸ್ಯೆಗೆ ಕಾರಣವಾಗಬಹುದು ಎನ್ನುತ್ತದೆ ಅಧ್ಯಯನ. ಇವೆಲ್ಲದರ ಜೊತೆಗೆ ಮಗುವಿನ ಆರೈಕೆ ಸರಿಯಾಗಿಲ್ಲದಿರುವುದು, ಗರ್ಭಾವಸ್ಥೆಯಲ್ಲಿ ಆ್ಯಂಟಿಬಯಾಟಿಕ್ ಹೆಚ್ಚಾಗಿ ಸೇವಿಸಿರುವುದು ಕೂಡ ಹುಟ್ಟಿದ ಮಗುವಿನಲ್ಲಿ ಆಟಿಸಂ ಲಕ್ಷಣ ಕಾಣಿಸಿಕೊಳ್ಳಲು ಕಾರಣವಾಗುತ್ತದೆ.

## ಆಟಿಸಂ ಮಕ್ಕಳ ಪತ್ತೆ ಹೇಗೆ?


ಸಾಮಾನ್ಯವಾಗಿ ಮಕ್ಕಳ ಚಟುವಟಿಕೆ ಹುಟ್ಟಿದ ನಂತರ ಆಯಾಯ ತಿಂಗಳಿಗೆ, ವರ್ಷಕ್ಕೆ ಹೀಗೇ ಇರುತ್ತದೆ ಎಂಬ ವೈದ್ಯ ನಿಯಮವಿದೆ. ಆದರೆ ಮಕ್ಕಳು ಚಿಕ್ಕವಯಸ್ಸಿನಲ್ಲಿ ಸರಿಯಾಗಿ ಸ್ಪಂದಿಸದೆ ಇದ್ದಾಗ, ಪ್ರತಿಕ್ರಿಯೆ ತೋರದೇ ಇರುವುದು, ಆಟವಾಡಲು ಆಸಕ್ತಿ ಇಲ್ಲದಿರುವುದು, ಮಗುವಿನ ನೋಟದಲ್ಲಿ ಭಿನ್ನತೆ ಕಂಡುಬರುವುದು, ಇದ್ದಕ್ಕಿದ್ದಂತೆ ಮಗು ಹಟ ಮಾಡಲು ತೊಡಗುವುದು ಮುಂತಾದ ಲಕ್ಷಣಗಳು ಕಂಡುಬಂದರೆ ಆಟಿಸಂ ಸಮಸ್ಯೆ ಇದೆ ಎಂಬುದು ಸ್ಪಷ್ಟ.

## ನಡವಳಿಕೆ ಸಮಸ್ಯೆಗಳು

ಈ ಸಮಸ್ಯೆಯನ್ನು ಇಂಡಿಯನ್ ಸ್ಕೇಲ್ ಫಾರ್ ಅಸೆಸ್‌ಮೆಂಟ್ ಆಫ್ ಆಟಿಸಂ (ISAA) ಮತ್ತು ಮಾಡಿಫೈಡ್ ಚೆಕ್‌ಲಿಸ್ಟ್ ಫಾರ್ ಆಟಿಸಂ (MCHAT) ಇತರ ಪ್ರಶ್ನಾವಳಿಗಳನ್ನು ಬಳಸಿ ಸಮಸ್ಯೆಯನ್ನು ಕಂಡುಹಿಡಿಯಲಾಗುತ್ತದೆ. ಇದನ್ನು ಒಂದೂವರೆ ವರ್ಷ ಮೇಲ್ಪಟ್ಟ ಮಕ್ಕಳಲ್ಲಿ ಗುರುತಿಸಬಹುದು.

ಆಟಿಸಂ ಸ್ಪೆಕ್ಟ್ರಮ್ ಡಿಸಾರ್ಡರ್‌ಗೆ ನಿಖರವಾದ ಕಾರಣ ಇಂದಿಗೂ ಸಂಪೂರ್ಣವಾಗಿ ಗುರುತಿಸಲಾಗಿಲ್ಲ. ಆದರೆ ಹಲವು ಸಂಶೋಧನೆಗಳು ಈ ಸಮಸ್ಯೆಗೆ ಸಂಭಾವ್ಯ ಕಾರಣಗಳನ್ನು ಸೂಚಿಸುತ್ತವೆ. ಅವುಗಳೆಂದರೆ–

- ಕುಟುಂಬದ ಇತಿಹಾಸದಲ್ಲಿ ಯಾರಿಗಾದರೂ ಆಟಿಸಂ ಅಥವಾ ಇತರ ಬುದ್ಧಿ ಬೆಳವಣಿಗೆಯಲ್ಲಿ ಸಮಸ್ಯೆಗಳಿದ್ದರೆ, ಮಕ್ಕಳಲ್ಲಿ ಇದರ ಸಂಭವನೀಯತೆ ಹೆಚ್ಚಾಗಬಹುದು.
- ಪ್ರಸವಪೂರ್ವ ಸಮಸ್ಯೆ ಮತ್ತು ಮಗು ಅವಧಿಪೂರ್ವ ಜನಿಸುವುದು.
- ಆನುವಂಶಿಕ ಅಸ್ವಸ್ಥತೆಗಳು– ಉದಾಹರಣೆಗೆ: ಡೌನ್ ಸಿಂಡ್ರೋಮ್ ಇರುವ ಮಕ್ಕಳಲ್ಲಿ ಆಟಿಸಂ ಕಾಣಿಸಿಕೊಳ್ಳುವ ಸಾಧ್ಯತೆ ಇದೆ.




### ಆಟಿಸಂನ ಲಕ್ಷಣಗಳೇನು?

- ಇತರ ಮಕ್ಕಳೊಂದಿಗೆ ಬೆರೆಯುವುದಿಲ್ಲ.
- ಸನ್ನೆಗಳಲ್ಲಿ ಮಾತನಾಡುವುದು.
- ಒಂದೇ ಜಾಗದಲ್ಲಿ ಹೆಚ್ಚು ಸಮಯ ಕುಳಿತುಕೊಳ್ಳದೇ ಇರುವುದು.
- ನಡವಳಿಕೆಯಲ್ಲಿ ಸಮಸ್ಯೆಗಳು.
- ಮೌಖಿಕ ಸಂವಹನ ಮತ್ತು ಸಂವೇದನಾ ಸಮಸ್ಯೆಗಳು.
- ಪ್ರತಿ ದಿನದ ದಿನಚರಿಗಳಿಗೆ ಹೊಂದಿಕೊಳ್ಳಲು ಕಷ್ಟವಾಗುವುದು.
- ಸಣ್ಣ ಬದಲಾವಣೆಗಳಿಗೆ ಹೊಂದಿಕೊಳ್ಳಲಾಗದೇ ಇರುವುದು.
- ಪುನರಾವರ್ತಿತ ಚಟುವಟಿಕೆಗಳು.
- ದೇಹದ ಭಾಷೆಯಲ್ಲಿ ಅಸಹಜತೆ

## ನರವೈಕಲ್ಯಗಳು

ಆಟಿಸಂಗೆ ಶಾಶ್ವತ ಚಿಕಿತ್ಸೆ ಇಲ್ಲದಿದ್ದರೂ ಮಗುವಿನ ಸಮಗ್ರ ಬೆಳವಣಿಗೆಗೆ ಸಹಾಯ ಮಾಡುವ ಹಲವು ಚಿಕಿತ್ಸೆ ವಿಧಾನಗಳು ಲಭ್ಯವಿದೆ. ಈ ವಿಧಾನಗಳು ಮಕ್ಕಳ ಸಾಮಾಜಿಕ, ಭಾಷಾ, ವರ್ತನಾ ಹಾಗೂ ಕಲಿಕೆಯ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಲು ಸಹಕಾರಿಯಾಗುತ್ತವೆ.

ಮನೋವೈದ್ಯರು ಮಕ್ಕಳ ವರ್ತನಾ ಸಮಸ್ಯೆಗಳನ್ನು ಗುರುತಿಸಿ, ಅದಕ್ಕೆ ತಕ್ಕ ತರಬೇತಿಯನ್ನು ನೀಡಬಲ್ಲರು.

ಭಾಷಾ ಮತ್ತು ಸಂವಹನ ಚಿಕಿತ್ಸೆ (Speech and Language Therapy) ಮಕ್ಕಳಿಗೆ ಮಾತನಾಡುವ, ಅರ್ಥ ಮಾಡಿಕೊಳ್ಳುವ ಮತ್ತು ಪರಿಣಾಮಕಾರಿಯಾಗಿ ಸಂವಹನ ಮಾಡುವ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ನೆರವಾಗುತ್ತದೆ.

## ಚಿಕಿತ್ಸೆ ಏನು?

ಮಗು ಹುಟ್ಟಿದ ಆರಂಭಿಕ ತಿಂಗಳುಗಳಲ್ಲಿ ಹೆಚ್ಚಿನ ನಿದ್ದೆಯಲ್ಲೇ ಕಳೆಯುವುದರಿಂದ ಮಗುವಿನ ಚಟುವಟಿಕೆ ಅಷ್ಟಾಗಿ ಗೊತ್ತಾಗದು. ಎರಡು ತಿಂಗಳ ಬಳಿಕ ಮಗು ತಾಯಿಯ ಮಾತು, ನಗು ಮುಂತಾದವುಗಳಿಗೆ ಸ್ಪಂದಿಸಲಾರಂಭಿಸುತ್ತದೆ. ಆ ಬಳಿಕ ಮಗು ಎಲ್ಲ ಚಟುವಟಿಕೆಗಳಲ್ಲಿ ಭಾಗಿಯಾಗುತ್ತದೆ. ಒಂದು ವೇಳೆ ಮಗು ನಿತ್ಯ ಮಂಕಾಗಿದ್ದು, ಯಾವುದೇ ರೀತಿಯ ಸ್ಪಂದನೆ ಇಲ್ಲದಿದ್ದರೆ ಮಗುವಿನಲ್ಲಿ ಸಮಸ್ಯೆ ಇದೆ ಎಂದು ತಿಳಿದುಕೊಳ್ಳಬೇಕು. ಸೂಕ್ತ ಚಿಕಿತ್ಸೆಯನ್ನೂ ಕೊಡಿಸಬೇಕು.

ಔದ್ಯೋಗಿಕ ಚಿಕಿತ್ಸಕರು (Occupational Therapists) ಮಕ್ಕಳ ದಿನನಿತ್ಯದ ಚಟುವಟಿಕೆಗಳು ಮತ್ತು ಸಂವೇದನಾ ಸಮಸ್ಯೆಗಳನ್ನು ಅಧ್ಯಯನ ಮಾಡಿ ಸೂಕ್ತ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡುತ್ತಾರೆ. ಹೀಗಾಗಿ ಶೈಕ್ಷಣಿಕ ಬೆಂಬಲದಿಂದ ಮಕ್ಕಳು ಶಾಲೆಯ ಪರಿಸರಕ್ಕೆ ಹೊಂದಿಕೊಳ್ಳಲು ಸಹಾಯವಾಗುತ್ತದೆ.

ತೀವ್ರ ವರ್ತನಾ ಸಮಸ್ಯೆಗಳನ್ನು ಹೊಂದಿರುವ ಮಕ್ಕಳಿಗೆ ಔಷಧ ಚಿಕಿತ್ಸೆಯನ್ನು (ಫಾರ್ಮಿಕೋ ಥೆರಪಿ) ವೈದ್ಯರು ನೀಡುತ್ತಾರೆ. ವಿಕಲಾಂಗ ಮಕ್ಕಳ ಸಬಲೀಕರಣ ಇಲಾಖೆಯು ಆಟಿಸಂ, ಸೆರೆಬ್ರಲ್ ಪಾಲ್ಸಿ, ಮಾನಸಿಕ ಆರೋಗ್ಯ ಕುಂಠಿತ, ಬಹು ಅಂಗವೈಕಲ್ಯ ಮತ್ತು ಇತರ ವಿಕಲಾಂಗ ಮಕ್ಕಳ ಕಲ್ಯಾಣಕ್ಕಾಗಿ ನ್ಯಾಷನಲ್ ಟ್ರಸ್ಟ್ ಅಡಿಯಲ್ಲಿ ಹಲವಾರು ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಆಟಿಸಂ ಸಮಸ್ಯೆ ಇರುವ ಮಕ್ಕಳ ಪೋಷಕರು ಇಂಥ ಯೋಜನೆಗಳ ಪ್ರಯೋಜನ ಪಡೆಯಬಹುದು.

(ಲೇಖಕಿ ಬೆಂಗಳೂರಿನ ವಾಣಿ ವಿಲಾಸ ಆಸ್ಪತ್ರೆಯಲ್ಲಿ ಮಕ್ಕಳ ತಜ್ಞೆ.
ಪೂರಕ ಮಾಹಿತಿ: ಡಾ. ವೀಣಾ ಎಂ., ಮನಶಾಸ್ತ್ರಜ್ಞೆ.)